# ಕಣಿವೆಯ ಗರ್ಭದಲ್ಲರಳಿದ ರಿಲಾ ಮೊನಾಸ್ಟೆರಿ

## ಬಲ್ಗೇರಿಯಾದ ಚಾರಿತ್ರಿಕ ಹೆಗ್ಗುರುತು, ಯುನೆಸ್ಕೊ ಸಂರಕ್ಷಿತ ತಾಣ

**ಪರ್ವತಶ್ರೇಣಿಗಳ ನಡುವೆ, ರಿಲಾ ನದಿ ಹರಿವ ಕಣಿವೆಯ ಗರ್ಭದಲ್ಲಿ ಕಟ್ಟಲಾಗಿರುವ 'ರಿಲಾ ಮೊನಾಸ್ಟೆರಿ'ಯನ್ನು ದೂರದಿಂದ ನೋಡಿದರೆ ಕಾಡೊಳಗಿನ ಪುಟ್ಟ ಕೋಟೆಯಂತೆ ಕಾಣುತ್ತದೆ. ಧಾರ್ಮಿಕ ಪರಿಧಿಯಾಚೆಗೆ, ಸಾಂಸ್ಕೃತಿಕ, ಚಾರಿತ್ರಿಕವಾಗಿ ಬಲ್ಗೇರಿಯಾದ ಆತ್ಮದಂತೆ ನಿಂತಿದೆ.**

■ ಡಾ. ಪ್ರೇಮಲತ ಬಿ.





ಮೊನಾಸ್ಟೆರಿ ಒಳಗಿನ ಚರ್ಚು

ಪ್ರತಿಯೊಂದು ದೇಶಕ್ಕೂ ಅದರದ್ದೇ ವಿಶೇಷ ಧಾರ್ಮಿಕ ಸ್ಥಳಗಳು, ನಂಬಿಕೆಗಳು ಹಾಗೂ ಚರಿತ್ರೆಗಳು ಬೆನ್ನಿಗೆ ನಿಂತಿರುತ್ತವೆ. ಅಲ್ಲಿನ ಧರ್ಮ, ನಂಬಿಕೆ, ಆಚಾರ ವಿಚಾರಗಳನ್ನು ಜಗತ್ತಿಗೆ ಸಾರುವ ತಾಣಗಳೂ ಅವಾಗಿರುತ್ತವೆ. ಆದರೆ ಧರ್ಮದ ಜೊತೆಗೆ ಚರಿತ್ರೆ, ರಾಜಕೀಯ ಮತ್ತು ದೇಶವೊಂದನ್ನು ರೂಪಿಸುವಲ್ಲಿ ಮಹತ್ತರ ಪಾತ್ರ ವಹಿಸುವ ಕಾರಣ ಧಾರ್ಮಿಕ ಚೌಕಟ್ಟನ್ನು ಮೀರಿದ ಪ್ರವಾಸಿ ಸ್ಥಳವೆಂದು ಗುರುತಿಸಿಕೊಂಡ ಕೆಲವು ಸ್ಥಳಗಳಿರುತ್ತವೆ. ಅವುಗಳ ಸಾಲಿಗೆ ಬಲ್ಗೇರಿಯಾದ ರಿಲಾ ಮೊನಾಸ್ಟೆರಿ ಸೇರಿದೆ.

ಬಲ್ಗೇರಿಯಾ ದೇಶಕ್ಕೆ ಹೋಗಲಿದ್ದೇವೆ ಎಂದ ಕೂಡಲೇ, ಬಲ್ಗೇರಿಯಾದಲ್ಲಿನ ನನ್ನ ಸ್ನೇಹಿತರು ಹೇಳಿದ್ದು ರಿಲಾ ಮೊನಾಸ್ಟೆರಿ ಬಗ್ಗೆಯೇ. 'ರಿಲಾ ಮೊನಾಸ್ಟೆರಿಗೆ ತಪ್ಪದೆ ಹೋಗಿ ಬನ್ನಿ, ನಿಮಗೆ ಖಂಡಿತ ಇಷ್ಟವಾಗುತ್ತದೆ' ಎಂದು ಸಲಹೆ ನೀಡಿದ್ದರು.

'ಹೌದೇ? ಏನದರ ವಿಶೇಷ?' ಎಂದು ಕೇಳಿದಾಗ, ಅಲ್ಲಿನ ಸುಂದರ ನೋಟ, ಪ್ರಶಾಂತ ಗಾಳಿ, ಆ ಏಕಾಂತ, ಅಲ್ಲಿಂದ ಕಾಣುವ ದೃಶ್ಯಗಳು, ಅದರ